# 56

# ನಿಮ್ಮ ಸಹೋದರರನನ್ನು ಬಲಪಡಿಸುವದು ಹೇಗೆ

## (18:22, 23ಣೆ 19:1)

ಕ್ರಿಸ್ತನಲ್ಲಿದ್ದ ತನ್ನ ಸಹೋದರರರನ್ನು ಪೌಲನು ಪ್ರೀತಿಸಿದನು. ಪೌಲನು ತನ್ನ ಮೂರನೆಯ ಪ್ರಯಾಣದಲ್ಲಿ, "... ಪ್ರಥಮವಾಗಿ, ಗಲಾತ್ಯ ಸೀಮೆಯಲ್ಲಿಯೂ ಫ್ರಗ್ಯದಲ್ಲಿಯೂ ಸಂಚಾರ ಮಾಡುತ್ತಾ ಶಿಷ್ಯರೆಲ್ಲರನ್ನೂ ದೃಢಪಡಿಸಿದನು" (ಅಪೊಸ್ತಲರ ಕೃತ್ಯಗಳು 18:23). ದೀಕ್ಷಾಸ್ನಾನವಲ್ಲದ ದೀಕ್ಷಾಸ್ನಾನ ಎಂಬ ಪಾಠದಲ್ಲಿ, ಪೌಲನು ಅನೇಕ ತಿಂಗಳುಗಳ ಕಾಲ, ಪ್ರಯಾಣಮಾಡಿ, 1,500 ಮೈಲುಗಳ ಅಂತರವನ್ನು ಕ್ರಮಿಸಿದನು. ಎಂದು ಲೂಕನು ತಿಳಿಸಿರುವನು, ಕ್ರೈಸ್ತರೊಂದಿಗೆ ಅನ್ಯೋನ್ಯತೆಯಲ್ಲಿದ್ದನು ಎಂದು ಆ ಮೂರು ವಚನಗಳು ತಿಳಿಸುತ್ತವೆ, ಅವುಗಳನ್ನು ನಿಧಾನವಾಗಿ ಪರಿಶೀಲಿಸೋಣ.

### ಅವರೊಂದಿಗೆ ಸಮಯವನ್ನು ಕಳೆದನು (18:22, 23)

ಸಹೋದರರರೊಂದಿಗೆ ಸಮಯವನ್ನು ಕಳೆಯುವದರಲ್ಲಿ ಪೌಲನು ಆನಂದ ಪಟ್ಟನು. ಅವನ ಎರಡನೆಯ ಪ್ರಯಾಣದ ಅಂತ್ಯದಲ್ಲಿ ಅವನು "ಅಂತಿಯೋಕ್ಯಕ್ಕೆ" ಮತ್ತು (ವಚನ 22) ಸಿರಿಯಕ್ಕೆ ಹಿಂದಿರುಗಿ, "ಅಲ್ಲಿ ಸ್ವಲ್ಪ ಸಮಯವನ್ನು ಕಳೆದನು" (ವಚನ 23). ಅವನು ಅಲ್ಲಿ ಚಳಿಗಾಲವನ್ನು ಕಳೆದಿರಬಹುದು, ಅವನು ಪ್ರಪಂಚದಾದ್ಯಂಥ ಸೇವೆಗೆ ಸಹಕರಿಸಿದ ಸಭೆಯೊಂದಿಗೆ ಇರಲೂ ಬಹುದು, ಮತ್ತು ಅವನು ವಸಂತಕಾಲದಲ್ಲಿ ತನ್ನ ಮೂರನೆಯ ಪ್ರಯಾಣವನ್ನು ಆರಂಭಮಾಡಿರಬಹುದು (ವಚನ 23).[1] ಅವನ ಪ್ರಯಾಣದ ಅಂತ್ಯದಲ್ಲಿ ಮಾಡುತ್ತಿದ್ದ ಪದ್ಧತಿಯಂತೆ, ಅವನು ಪುನಃ ಅಂತಿಯೋಕ್ಯಕ್ಕೆ ಹಿಂದಿರುಗುವ ಯೋಜನೆಯನ್ನು ಹೊಂದಿರಬಹುದು, ಆದರೆ ಅವನು ಅಂತಿಯೋಕ್ಯದಿಂದ ಹೊರಟಾಗ, ಪುನಃ ಅಲ್ಲಿಗೆ ಬಾರದೆ ಇರುವದನ್ನು ಅರಿತಿರಲಿಲ್ಲ.

ಯಾರಿಂದಾದರೂ ನೀವು ಬೀಳ್ಕೊಡಲ್ಪಟ್ಟಾಗ, ಅವರನ್ನು ಪುನಃ ಸಂಧಿಸುವ ಸಾಧ್ಯತೆಗಳು ಇರುವದಿಲ್ಲ ಎಂದು ತಿಳಿಯಬೇಕು, ನೀವು ಅವಳನ್ನಾಗಲಿ, ಅಥವಾ ಅವನನ್ನಾಗಲಿ ಬಿಟ್ಟು ಹೋಗುವಾಗ, ಅವರಿಗೂ ಮತ್ತು ನಿಮಗೂ ನಡುವಿನಲ್ಲಿ ಯಾವುದೆ ಕಹಿಭಾವವು ಇರದಂತೆ ನೋಡಿಕೊಳ್ಳಲಿ.

ಪೌಲನ ಪ್ರಯಾಣದ ಆರಂಭದಲ್ಲಿ ಅವನೊಂದಿಗೆ ಜೊತೆ ಪ್ರಯಾಣಿಕರು ಇದ್ದರು ಎಂದು ತಿಳಿಸಿರುವದಿಲ್ಲ, ಆದರೆ ಪೌಲನು ತಾನು ಒಂಟಿಯಾಗಿಯೇ ಪ್ರಯಾಣಿಸಿದನು. ತಿಮೊಥಿಯು ಎಫೆಸದಲ್ಲಿದ್ದನು ಎಂದು ಲೂಕನು ನಂತರದಲ್ಲಿ ತಿಳಿಸಿರುವನು (19:22). ಒಂದು ವೇಳೆ ಆ ಯೌವನಕಾಲದ ಕೊರಿಂಥದ[2] ಪ್ರಸಂಗಿಯು ಪೌಲನೊಂದಿಗೆ ಪ್ರಯಾಣಿಸಿರಬಹುದು.[3] ತೀತನು ಸಹ ಪೌಲನೊಂದಿಗೆ ಎಫೆಸದಲ್ಲಿದ್ದನು ಎಂದು 2 ಕೊರಿಂಥದಲ್ಲಿ ನೋಡುತ್ತೇವೆ (2 ಕೊರಿಂಥ 2:13; 7:6, 13, 14; 8:6, 16, 23; 12:18); ಪೌಲನು ಅಂತಿಯೋಕ್ಯವನ್ನು ಬಿಟ್ಟು ಹೋಗುವಾಗ, ತೀತನು ಅವನೊಂದಿಗಿರುವ ಸಾಧ್ಯತೆಗಳಿವೆ.[4]

### ನೀವು ಹೋಗುವ ಸ್ಥಳಗಳಲ್ಲೆಲ್ಲಾ ಅವರನ್ನು ಸಂಧಿಸಿರಿ (18:23)

ಪೌಲ, ಮತ್ತು ಅವನ ಸಂಗಡಿಗರು (ಅವರು ಯಾರೇ ಆಗಿರಲಿ) ಅಂತಿಯೋಕ್ಯವನ್ನು ತೊರೆದು ಹೋಗುವಾಗ, ಪೌಲ ಸೀಲರು ತಮ್ಮ ಎರಡನೆ ಪ್ರಯಾಣದಲ್ಲಿ ಸಂಚರಿಸಿದ್ದ

ಮಾರ್ಗವನ್ನೆ ಆಯ್ಕೆಮಾಡಿಕೊಂಡರು (ಮೂರನೇ ಪ್ರಯಾಣದ ನಕ್ಷೆ ನೋಡಿರಿ).[5] ಅವರು ಉತ್ತರದ ಸಿರಿಯದಿಂದ ಹೊರಟು, ಕಿಲಿಕ್ಯ ಎಂಬ ಹಾದಿಯಿಂದ ತಾರಸ್ ಪರ್ವತದ ಮೂಲಕ, ದಕ್ಷಿಣದ ಗಲಾತ್ಯದ ಪ್ರಸ್ಥ ಭೂಮಿಗೆ ಸೇರಿದರು, ನಂತರ "ಗಲಾತ್ಯ ಸೀಮೆಯಲ್ಲಿಯೂ, ಫ್ರುಗ್ಯದಲ್ಲಿಯೂ ಸಂಚಾರ ಮಾಡಿದರು" (ಅಪೊಸ್ತಲರ ಕೃತ್ಯಗಳು 18:23ಬಿ). ಪ್ರಥಮ ಪ್ರಯಾಣದಲ್ಲಿ ಸಂಧಿಸಿದ ಸಭೆಗಳನ್ನು ಪುನಃ ಸಂಧಿಸಿದರು. ಮತ್ತು ಅವರ ವೃದ್ಧಿಯನ್ನು ಗಮನಿಸಿ, ಪೌಲ ಮತ್ತು ಅವನ ಸಂಗಡಿಗರು "ಅಲ್ಲಿದ್ದ ಶಿಷ್ಯರೆಲ್ಲರನ್ನು ದೃಢಪಡಿಸಿದರು" (ವಚನ 23ಸಿ).

ಈ ಪ್ರಯಾಣದ ವಿವರವನ್ನು ಲೂಕನು ನೀಡಬೇಕಿತ್ತು ಎಂದು ನನ್ನ ಆಶೆ. ಒಂದು ವೇಳೆ ತಿಮೊಥಿಯು ಪೌಲನ ಸಂಗಡ ಇದಿದ್ದರೆ, ತಿಮೊಥಿಯ ಕಣ್ಣೀರಿನಿಂದ ತನ್ನ ತಾಯಿಯನ್ನು ಲುಸ್ತ್ರದಲ್ಲಿ ಸಂಧಿಸಿರಬಹುದು (ಅವನು ಜೀವದಿಂದ ಇರುವದನ್ನು ನೋಡಿ ಅವಳು ಆಶ್ಚರ್ಯಪಟ್ಟಿರಬಹುದು.) ಕರ್ತನ ಸಭೆಯನ್ನು ಸಂಧಿಸುವ ಅವಕಾಶವನ್ನು ಪೌಲನು ಎಂದಿಗೂ ಕಳಕೊಳ್ಳಲಿಲ್ಲ ನಾವೂ ಸಹ ಕಳಕೊಳ್ಳಬಾರದು.

## ಅವರಿಗೆ ಸಹಾಯ ಮಾಡಿರಿ (18:22, 23)

ಪೌಲನ ಮೂರನೆ ಪ್ರಯಾಣದ ಉದ್ದೇಶವನ್ನು ಲೂಕನು ತಿಳಿಸಿರುವದಿಲ್ಲ,[6] ಈ ಸಮಯದಲ್ಲಿ ಈ ಪತ್ರವನ್ನು ಬರೆದಿರಬಹುದು ಎಂದು ತಿಳಿಯುತ್ತೇವೆ; "ಯೆರೂಸಲೇಮಿನ ಬಡ ಜನರಿಗಾಗಿ ಹಣವನ್ನು ಸಂಗ್ರಹಿಸಲು ಹೋಗುತ್ತೇನೆ ಅಂದನು" (ರೋಮಾಪುರ 15:26). ಅವನು ಗಲಾತ್ಯವನ್ನು ಹಾದು ಹೋಗುವಾಗ, ವಾರದ ಮೊದಲನೆಯ ದಿನದಲ್ಲಿ ದಾನವನ್ನು ಸಂಗ್ರಹಿಸಲು ಹೇಳಿದನು (1 ಕೊರಿಂಥ 16:1, 2). ಯೆರೂಸಲೇಮಿನವರಿಗೆ ಆ ದಾನವನ್ನು ತಲುಪಿಸುವ ಏರ್ಪಾಟನ್ನು ಸಹ ಮಾಡಿದನು (1 ಕೊರಿಂಥ 16:3, 4; ಅಪೊಸ್ತಲರ ಕೃತ್ಯಗಳು 20:4).[7]

ಪೌಲನು ತನಗಿಂತ ತನ್ನ ಸಹೋದರರ ಬಗ್ಗೆ ಯಾವಾಗಲೂ ಚಿಂತಿಸುವವನಾಗಿದ್ದನು. ನಮ್ಮ ಸಹೋದರರ ಬಗ್ಗೆ ನಾವು ಚಿಂತಿಸುವವರಾಗಿದ್ದೇವಾ?

## ನಿನ್ನ ಮಾತುಗಳನ್ನು ಕಾಪಾಡಿಕೋ (18:21ಣಿ 19:1)

ಗಲಾತ್ಯ ಮತ್ತು ಫುರ್ಗ್ಯದ ಕೆಲಸ ಮುಗಿದ ನಂತರ, ಪೌಲ ಮತ್ತು ಅವನ ಸಂಗಡಿಗರು ಎಫೆಸಕ್ಕೆ ಹೊರಟರು. ಎಫೆಸದ ಯೆಹೂದ್ಯರಿಗೆ ತಾನು ಹಿಂದಿರುಗುವೆನೆಂಬ ಮಾತನ್ನು ಪೌಲನು ನೀಡಿದ್ದನು (18:21), ಮತ್ತು ಆ ಮಾತನ್ನು ಅವನು ಈಡೇರಿಸಿದನು. ಅಬ್ರಹಾಮನ ಮೂಲಕ ಈ ಯೆಹೂದ್ಯರು ಪೌಲನ ಸಹೋದರರಾಗಿದ್ದರು, ಮತ್ತು ಅವರನ್ನು ಕ್ರಿಸ್ತನಲ್ಲಿ ಸಹೋದರರನ್ನಾಗಿ ಮಾಡಬೇಕೆಂದು ನಿರೀಕ್ಷಿಸುತ್ತಿದ್ದನು.

ಸಂಬಂಧ ಬಾಂಧವ್ಯಗಳಲ್ಲಿ ಇರುವ ಇಬ್ಬರಲ್ಲಿ ಒಬ್ಬರು ಅಪನಂಬಿಗಸ್ತರಾಗಿ ಇದ್ದರೆ ಅದರಿಂದ ಉಂಟಾದ ನಾಶವು ಬಾಂಧವ್ಯಕ್ಕೆ ತೀರ್ವವಾಗಿರುವುದು. ಮಾತುಗಳನ್ನು ಉಳಿಸಿಕೊಳ್ಳುವ ಸ್ತ್ರೀ, ಪುರುಷರಾಗಿರೋಣ!

## ಮುಕ್ತಾಯ

"ಅಪೋಲ್ಲೊಸನು ಕೊರಿಂಥದಲ್ಲಿದ್ದಾಗ,[8] ಪೌಲನು ಮಲೆನಾಡಿನಲ್ಲಿ ಸಂಚಾರ ಮಾಡಿ[9] ಎಫೆಸಕ್ಕೆ ಬಂದನು" (19:1ಎ). ಸಹೋದರರ ಕುರಿತಾಗಿ ಶುದ್ಧ ಮನಸ್ಸನು ಹೊಂದಿದವನಾಗಿ ಪೌಲನು ಎಫೆಸಕ್ಕೆ ಬಂದನು, ಅವರಿಗೆ ಉತ್ತೇಜನ ಪಡಿಸುವದರಲ್ಲಿ ಸಾಧ್ಯವಾದ್ದನ್ನು ಮಾಡಿದ್ದನು. ನಾವು ಹೋಗುವಂಥ ಸ್ಥಳದಲ್ಲಿ, ಇದನ್ನೇ ಹೇಳಬಹುದು.

ಟಿಪ್ಪಣಿಗಳು

[1]ಕ್ರಿ.ಶ. 52ರಲ್ಲಿ ಅವನು ಹೊರಟಿರಬಹುದು. ಅಥವಾ ಕ್ರಿ.ಶ 53ರಲ್ಲಿ ಇರಬಹುದು. [2]ಸೀಲ ಅಥವಾ ತಿಮೊಥಿ ಅವನ ಸಂಗಡ ಹೋದರು ಎಂದಿರುವದಿಲ್ಲ (18:18). [3]ಇತರೆ ಸಾಧ್ಯತೆಗಳೇನೆಂದರೆ: ತಿಮೊಥಿಯ ಕೊರಿಂಥದಿಂದ ತನ್ನ ತಾಯಿಯನ್ನು ನೋಡಲು ಲುಸ್ತ್ರಕ್ಕೆ ಹೋದಾಗ, ಪೌಲನನ್ನು ಸಂಧಿಸಿರಬಹುದು, ಅಥವಾ ಕೊರಿಂಥದಿಂದ ಎಫೆಸಕ್ಕೆ ತಿಮೊಥಿಯು ಪ್ರಯಾಣಮಾಡಿರಬಹುದು. [4]ಲೂಕನು ತೀತನ ಬಗ್ಗೆ ತಿಳಿಸದೆ ಇರುವದು ಅಪೊಸ್ತಲರ ಕೃತ್ಯದ ರಹಸ್ಯವಾಗಿದೆ. ತೀತನು ಲೂಕನು ಸಂಬಂಧಿಯಾಗಿದ್ದನು. ಇತರೆ ಸಂಪ್ರದಾಯದ ಪ್ರಕಾರ, ಲೂಕನಂತೆ, ತೀತನು ಸಹ ಸಿರಿಯದ ಅಂತಿಯೋಕ್ಯದವನಾಗಿರಬಹುದು (ಗಲಾತ್ಯ 1:21; 2:1). ಪೌಲನ ಪ್ರಯಾಣದಲ್ಲಿ ಸಹಕರಿಸುವದು ಅವನಿಗೆ ಸಹಜವಾಗಿತ್ತು. [5]ಪೌಲನ ಮೊದಲನೆಯ ಮತ್ತು ಎರಡನೇ ಸೇವೆಯ ಪ್ರಯಾಣಗಳು ಎಂಬ ನಕ್ಷೆಯನ್ನು *ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದಲ್ಲಿ ನೋಡಿರಿ. [6]ಅಪೊಸ್ತಲರ ಕೃತ್ಯಗಳು 24:17ರ ಪ್ರಯಾಣದ ವಿಶೇಷ ವರದಿಯನ್ನು ಮಾತ್ರ ಲೂಕನು ತಿಳಿಸಿರುವನು. [7]ಸೋಪತ್ರನೂ ಹಾಗೂ ಗಾಯನು, ಪೌಲನೊಂದಿಗೆ ಸಹಕರಿಸಿದರು (20:4). ತಿಮೊಥಿಯ ಸಹ ಬಂದನು (20:4). [8]ಎಫೆಸದಲ್ಲಿ ಕೆಲಕಾಲ ಕೆಲಸಮಾಡಿದ ನಂತರ, ಅಪೊಲ್ಲೋಸನ ಕೊರಿಂಥಕ್ಕೆ ಹೋದನು (18:27). [9]ಸಾಮಾನ್ಯ ವ್ಯವಹಾರದ ಮಾರ್ಗದಿಂದ ಪೌಲನು ಎಫೆಸಕ್ಕೆ ಪ್ರಯಾಣಿಸಲಿಲ್ಲ. ಉತ್ತರ ದಿಕ್ಕಿನಿಂದ ಎಫೆಸಕ್ಕೆ ಬಂದನು.